ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

**ಸ್ಪೆಷಲ್ ಕೇಸ್ ನಂಃ 276/2023**

| | ಚಾಸಾಃ 12 | ಅಸಾಃ 11 |
|---|---|---|
| ಹೆಸರು | ಡಾ. ಶ್ವೇತಾ | |
| ಗಂಡನ ಹೆಸರು : | ಧರ್ಮೇಶ್ ಪಿ | |
| ವಯಸ್ಸುಃ | 38 ವರ್ಷ | |
| ಕೆಲಸಃ | ವೈದ್ಯಾಧಿಕಾರಿ | |
| ವಾಸಸ್ಥಳ | ಕೇರಳ | |

ದಿನಾಂಕಃ **13/05/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ಜೂನ್ 2021 ರಿಂದ ಮೇ 2023 ರವರೆಗೆ ನಾನು ಶ್ರವಣಬೆಳಗೊಳ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ. 07.04.2023 ರಂದು ರಾತ್ರಿ 11.55 ಕ್ಕೆ ಚಾಸಾ-1 ರವರು ನಾಗೇಶ್ ಮತ್ತು ಇತರರು ಹೊಡೆದಿರುವ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಎಡಪಾದದಲ್ಲಿ 3*2 ಸೆಂಮೀ ತರಚಿದ ಗಾಯ
2. ಕುತ್ತಿಗೆ ಹಾಗೂ ಭುಜದ ಮೇಲೆ ಮುಟ್ಟಿದರೆ ನೋವು

ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಇದಕ್ಕೆ ಸಂಬಂಧಪಟ್ಟ ಗಾಯದ ಪ್ರಮಾಣಪತ್ರವನ್ನು ನೀಡಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಗಿದೆ.

ದೊಣ್ಣೆ ಅಥವಾ ರಾಡಿನಿಂದ ಹೊಡೆದರೆ ಮೇಲ್ಕಂಡ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಡಿ ಎಂ ವಕೀಲರಿಂದಃ

ನಾನು ಪೊಲೀಸರಿಗೆ ಎಂ ಎಲ್ ಸಿ ಇಂಟಿಮೇಷನ್ ಕಳುಹಿಸಿರುತ್ತೇನೆ. ಗಾಯಾಳುವಿಗೆ ಚಿಕಿತ್ಸೆ ಕೊಟ್ಟ ನಂತರ ಪೊಲೀಸರಿಗೆ ಎಂ ಎಲ್ ಸಿ ಕಳುಹಿಸಿರುತ್ತೇನೆ. ದಿ. 08.04.2023 ರಂದು ನಾನು ಪೋಲೀಸರಿಗೆ ಇಂಟಿಮೇಷನ್ ಕಳುಹಿಸಿರುತ್ತೇನೆ. ನಾನು ಪರೀಕ್ಷೆ ಮಾಡಿದಾಗ ಗಾಯದ ವಯಸ್ಸು 6 ಗಂಟೆಗಿಂತ ಕಡಿಮೆ ಇತ್ತು. ಗಟ್ಟಿಯಾದ ನೆಲದ ಮೇಲೆ ಕಾಲು ತರಚಿದಾಗ 1ನೇ ಗಾಯವಾಗುವ ಸಾಧ್ಯತೆ ಇರುತ್ತದೆ. 2ನೇ ಗಾಯ ಎಡ ಅಥವಾ ಬಲ ಭುಜ ಕುತ್ತಿಗೆ ಮೇಲೆ ಗಾಯವಾಗಿತ್ತಾ ಎಂದರೆ ಸಾಕ್ಷಿ ಪೂರ್ತಿ ಭುಜ ಹಾಗೂ ಕುತ್ತಿಗೆ ಮೇಲೆ ಆಗಿರುತ್ತದೆ ಎಂದು ಗಾಯಾಳು ತಿಳಿಸಿರುತ್ತಾರೆ. ಮಲಗುವಾಗ ಸರಿಯಾಗಿ ಮಲಗದೇ ಇದ್ದರೆ 2ನೇ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಗಾಯಾಳುವನ್ನು ನಾನು ಸರಿಯಾಗಿ ಪರೀಕ್ಷೆ ಮಾಡದೇ ಪೊಲೀಸರ ಮಾತು ಕೇಳಿ ಗಾಯದ ಪ್ರಮಾಣ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ